ಓ.ಎಸ್.ನಂ.47-2019

ಪಿ.ಡಬ್ಲ್ಯೂ-1.



ದಿ.23-02-2021 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀಸವಾಲುಃ ಪ್ರತಿವಾದಿ ಪರ ಶ್ರೀಮತಿ ಹೆಚ್.ಬಿ ವಕೀಲರಿಂದ.

1. ನಾನು ಈಗ ಭದ್ರಾವತಿಯಲ್ಲಿ ವಾಸ ಮಾಡುತ್ತಿದ್ದೇನೆ. ನನ್ನ ಗಂಡ ವಿ.ಐ.ಎಸ್.ಎಲ್ ನಲ್ಲಿ ಕೆಲಸ ಮಾಡುತ್ತಿದ್ದರು. ಅದಕ್ಕೂ ಮೊದಲು ನನ್ನ ಗಂಡ ತಣಿಗೆಬೈಲಿನ ರೋಪ್ ಲೈನಿನಲ್ಲಿ ಕೆಲಸ ಮಾಡುತ್ತಿದ್ದರು. ನನ್ನ ಗಂಡ ಕಬ್ಬಿಣದ ಅದಿರನ್ನು ತೆಗೆದು ರೋಪ್ ಲೈನಿನಲ್ಲಿ ಕಳುಹಿಸುವ ಕೆಲಸ ಮಾಡುತ್ತಿದ್ದರು. ನನ್ನ ಪ್ರಕಾರ 1969-70 ರಲ್ಲಿ ರೋಪ್ ಲೈನಿನ ಕೆಲಸ ನಡೆಯುತ್ತಿತ್ತು. ರೋಪ್ಲೈನಿನಲ್ಲಿ ಕಬ್ಬಿಣದ ಅದಿರನ್ನು ತಣಿಗೆಬೈಲಿನ ಕಾರ್ಖಾನೆಗೆ ತೆಗೆದುಕೊಂಡು ಹೋಗುತ್ತಿದ್ದರು. ರೋಪ್ ಲೈನಿನಲ್ಲಿ ಕೆಲಸ ಮಾಡುವ ಸಂದರ್ಭದಲ್ಲಿ ನಾವು ಮಂಚೆತ್ತೂರಿನಲ್ಲಿ ವಾಸ ಮಾಡುತ್ತಿದ್ದೆವು. ನನ್ನ ಗಂಡನಿಗೆ ಜಮೀನು ಮಂಜೂರಾದ ಸಮಯದಲ್ಲಿ ಸುಮಾರು 4-5 ಜನರಿಗೆ ಜಮೀನು ಮಂಜೂರಾಗಿತ್ತು. ನಮಗೆ ಜಮೀನು ಮಂಜೂರಾದ ಸಮಯದಲ್ಲಿ ಬೇರೆ ಯಾರಿಗೆ ಎಷ್ಟು ಜಮೀನು ಮಂಜೂರಾಗಿರುತ್ತದೆ ಎಂದು ನನಗೆ ಗೊತ್ತಿಲ್ಲ. ಜಮೀನು ನಮಗೆ ಮಂಜೂರಾದ ನಂತರ ನಾವು ಅದನ್ನು ವ್ಯವಸಾಯದ ಜಮೀನಾಗಿ ಪರಿವರ್ತಿಸಿಕೊಂಡಿರುತ್ತೇವೆ. ವ್ಯವಸಾಯದ ಜಮೀನಾಗಿ ಪರಿವರ್ತಿಸುವ ಸಮಯದಲ್ಲಿ ನಾವು ಸಾಕಷ್ಟು ಹಣ ಖರ್ಚು ಮಾಡಿದ್ದು ಅದಕ್ಕೆ ನಮ್ಮ ಬಳಿ ದಾಖಲೆಗಳು ಇರುವುದಿಲ್ಲ. ನಾವು ಜಮೀನು ಮಂಜೂರಾಗುವ ಮೊದಲೇ ಗದ್ದೆ ಕೆಲಸವನ್ನು ಮಾಡುತ್ತಿದ್ದು ಆ ಸಮಯದಲ್ಲಿಯೇ ನಮಗೆ ಜಮೀನು ಮಂಜೂರಾಗಿರುತ್ತದೆ. ನಮಗೆ ಜಮೀನು ಮಂಜೂರಾಗುವ ಸಮಯದಲ್ಲಿ ಭತ್ತವನ್ನು ಬೆಳೆದಿದ್ದು ನಂತರ ಕಡ್ಲೆ ಗಿಡ ಹಾಗೂ ಇತರೆ ಬೆಳೆಗಳನ್ನು ಬೆಳೆದಿದ್ದೆವು. ನಮ್ಮ ಜಮೀನಿನ ಉತ್ತರ ದಿಕ್ಕಿಗೆ ಹಳ್ಳವಿದ್ದು ಮಳೆ ಬಂದ ನೀರು ಅದರಲ್ಲಿ ಹರಿಯುತ್ತಿದ್ದು ಆ ಹಳ್ಳದ ನೀರನ್ನು ಜಮೀನಿಗೆ ತಿರುಗಿಸಿಕೊಳ್ಳುತ್ತಿದ್ದೆವು. ನಮಗೆ ಮಂಜೂರಾದ ದಕ್ಷಿಣ ದಿಕ್ಕಿಗೆ ಶಂಕರಲಿಂಗೇಗೌಡರ ಜಮೀನು ಇದೆ. ಸದರಿ ಶಂಕರಲಿಂಗೇಗೌಡರು ತಮ್ಮ ಜಮೀನಿನಲ್ಲಿ ಬಾಳೆಗಿಡ ಬೆಳೆದಿರುತ್ತಾರೆ. ನಮ್ಮ ಜಮೀನಿನಲ್ಲಿ ಹಾಕಿದ್ದ ಅಡಿಕೆ ಗಿಡಗಳು ಸರಿಯಾಗಿ ಬರಲಿಲ್ಲ, ಆ

**ಕಾರಣಕ್ಕೆ ನಾವು ಅಲ್ಲಿ ಬಾಳೆಯನ್ನು ಹಾಕಿರುತ್ತೇವೆ. ಬಾಳೆಗಿಡ ಫಸಲು ಕೊಡುತ್ತಿದೆಯಾ ಎಂದರೆ ಸಾಕ್ಷಿ ಈ ಪ್ರಕರಣ ದಾಖಲಾದ ನಂತರ ನಾವು ಆ ಕಡೆ ಹೋಗಿರುವುದಿಲ್ಲ ಎನ್ನುತ್ತಾರೆ. ನನ್ನ ಗಂಡ ರೋಪ್ವೈನ್ನಿಂದ ಯಾವಾಗ ವಿ.ಐ.ಎಸ್.ಎಲ್‌ಗೆ ಹೋಗಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ವಿ.ಐ.ಎಸ್.ಎಲ್ ನ ತಣಿಗೆಬೈಲು ಶಾಖೆಯ ರೋಪ್ ಲೈನನ್ನು ಮುಚ್ಚಿದ ನಂತರ ನನ್ನ ಬಂಡ ಭದ್ರಾವತಿಯ ವಿ.ಐ.ಎಸ್.ಎಲ್.ಗೆ ವರ್ಗಾವಣೆಯಾಗಿರುತ್ತಾರೆ. ನನ್ನ ಗಂಡ ರೋಪ್ ಲೈನನಲ್ಲಿ ಕೆಲಸ ಮಾಡುತ್ತಿರಲಿಲ್ಲ ಭದ್ರಾವತಿಯ ವಿ.ಐ.ಎಸ್.ಎಲ್‌ನಲ್ಲಿ ಕೆಲಸ ಮಾಡುತ್ತಿದ್ದು ಜಮೀನಿಗೆ ಹೋಗಿ ಬಂದು ಮಾಡುತ್ತಿದ್ದರು ಎಂದರೆ ಸರಿಯಲ್ಲ.**

**2. ನನ್ನ ಗಂಡ ಏನು ಓದಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನನ್ನ ಗಂಡ ಕೃಷಿ ಕೆಲಸವನ್ನು ಮಾಡುತ್ತಿರಲಿಲ್ಲ. ತಣಿಗೆಬೈಲಿನಿಂದ ಭದ್ರಾವತಿಗೆ ಶಿಫ್ಟ್ ಆಗುವ ಮೊದಲು ದಾವಾ ಸ್ವತ್ತಿನ ಬಾಬ್ತು ಕರಾರು ಪತ್ರವನ್ನು ನನ್ನ ಗಂಡ ಬರೆದುಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಗಂಡ ಮಾಡುತ್ತಿದ್ದ ಎಲ್ಲಾ ಕೆಲಸಗಳ ಮಾಹಿತಿ ನನಗೆ ಇತ್ತು.**

**ಮುಂದುವರಿದ ಪಾಟೀ ಸವಾಲುಃ ವಕೀಲರ ಕೋರಿಕೆಯ ಮೇರೆಗೆ ಕಾಲಾವಕಾಶ ನೀಡಿ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ. ಕೇ. ಸ. ಇ. ಎ. ಒ.

ಸಿವಿಲ್ ನ್ಯಾಯಾಧೀಶರು ಮತ್ತು ಹೆಚ್ಚುವರಿ
ಪ್ರ.ದ.ನ್ಯಾ.ದಂ. ರವರು, ತರೀಕೆರೆ.